ಕೊರತೆಯಿತ್ತು. ಈಗ ಸಾರಿಗೆ ಸಂಸ್ಥೆಯು ಲಾಭದಾಯಕವಾಗಿ ನಡೆಯುತ್ತಿದೆ. ಈ ಅಧಿವೇಶನ ಮುಗಿದ ತಕ್ಷಣವೇ, ಬಸ್‌ಸ್ಟ್ಯಾಂಡ್ ಶಂಕುಸ್ಥಾಪನೆ ಮಾಡಲಿಕ್ಕೆ ಬರಬೇಕು ಎಂದು ಅವರು ನನ್ನನ್ನು ಆಹ್ವಾನಿಸಿದ್ದಾರೆ. 40 ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುವ ಬಗ್ಗೆ ಈಗಾಗಲೇ ನಮ್ಮ ಸಂಸ್ಥೆ ಕಾರ್ಯಕ್ರಮವನ್ನು ಪಮ್ಮಿಕೊಳ್ಳಲಾಗಿದೆ. ಈ ಅಧಿವೇಶನ ಮುಗಿದ ತಕ್ಷಣ ನಾವು ಶಂಕುಸ್ಥಾಪನಾ ಕಾರ್ಯ ನೆರವೇರಿಸುವುದರ ಜೊತೆಗೆ ಈ ಕಟ್ಟಡದ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ಎಂ.ಭಕ್ತವತ್ಸಲಂ: ಇಲ್ಲಿ ಕೊಟ್ಟಿರುವ ಉತ್ತರದಲ್ಲಿ 3 ಎಕರೆ 89 ಗುಂಟೆಯೆಂದು ಇದೆ, ಅದು ನನಗೆ ಅರ್ಥವಾಗಲಿಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅದು ಮಿಸ್ಟೇಕ್ ಆಗಿದೆ, 3ಎಕರೆ 39ಗುಂಟೆ.

ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಪೋಲೀಸ್ ಠಾಣೆಯನ್ನು ತೆರೆಯುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 84(1263)

ಸದಸ್ಯರ ಹೆಸರು: ಶ್ರೀ ಸುರೇಶ್ ಬಾಬು ಸಿ.ಬಿ.(ಚಿಕ್ಕನಾಯಕನಹಳ್ಳಿ)

ಪ್ರಶ್ನೆಗಳು

ಅ) ತಿಪಟೂರು ಗ್ರಾಮಾಂತರ ಪೊಲೀಸ್ ಠಾಣೆಯನ್ನು ಕಿಬ್ಬನಹಳ್ಳಿ ಕ್ರಾಸ್‌ಗೆ ವರ್ಗಾಯಿಸಿ ಸರ್ಕಾರ ಆದೇಶ ಹೊರಡಿಸಿದ್ದು ನಿಜವೇ. ಆದರೆ ಇದುವರೆಗೂ ಕಾರ್ಯಾನುಷ್ಠಾನಗೊಳಿಸದಿರಲು ಕಾರಣಗಳೇನು?

ಆ) ಇನ್ನೆಷ್ಟು ದಿನಗಳಲ್ಲಿ ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಪೊಲೀಸ್ ಠಾಣೆಯನ್ನು ತೆರೆಯಲಾಗುವುದು?

ಉತ್ತರಿಸುವ ಸಚಿವರು: ಶ್ರೀ ಮಲ್ಲಿಕಾರ್ಜುನ ಖರ್ಗೆ(ಗೃಹ ಸಚಿವರು)

ಉತ್ತರಗಳು

ಅ) ಹೌದು.

ಈ ವಿಷಯದಲ್ಲಿ ವಿರೋಧವಿರುವುದರಿಂದ ಕಿಬ್ಬನಹಳ್ಳಿ ಕ್ರಾಸಿಗೆ ಪೊಲೀಸ್ ಠಾಣೆಯನ್ನು ವರ್ಗಾಯಿಸಿರುವುದಿಲ್ಲ.

ಆ) ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಹೊಸ ಪೊಲೀಸ್ ಠಾಣೆ ಸ್ಥಾಪಿಸುವ ವಿಚಾರವು ಸದ್ಯಕ್ಕೆ ಸರ್ಕಾರದ ಮುಂದೆ ಇರುವುದಿಲ್ಲ;

ಶ್ರೀ ಸಿ.ಬಿ.ಸುರೇಶ್ ಬಾಬು: ಮಾನ್ಯ ಅಧ್ಯಕ್ಷರೆ, ತಿಪಟೂರು ಗ್ರಾಮಾಂತರ ಪೋಲೀಸ್ ಠಾಣೆಯನ್ನು ಕಿಬ್ಬನಹಳ್ಳಿ ಕ್ರಾಸ್‌ಗೆ ವರ್ಗಾಯಿಸಿ ಸರ್ಕಾರ ಆದೇಶ ಹೊರಡಿಸಿದ್ದು ನಿಜವೇ ಎಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಆದರೆ ಆ ಬಗ್ಗೆ ಆಕ್ಷೇಪಣೆ ಇದೆ; ಯಾರದ್ದು ಎಂದು ಗೊತ್ತಿಲ್ಲವೆಂದು ಹೇಳಿದ್ದಾರೆ. ಯಾರ ವಿರೋಧವಿದೆಯೆಂಬುದನ್ನು ದಯಮಾಡಿ ಮಾನ್ಯ ಗೃಹ ಸಚಿವರು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ ಇದರಲ್ಲಿ ಏನಾಗಿದೆ ಅಂದರೆ, ತಿಪಟೂರು ಗ್ರಾಮಾಂತರ ಪೋಲೀಸ್ ಠಾಣೆಯನ್ನು ಕಿಬ್ಬನಹಳ್ಳಿ ಕ್ರಾಸ್‌ಗೆ ಶಿಫ್ಟ್ ಮಾಡಿದರೆ ತಿಪಟೂರು ಗ್ರಾಮಾಂತರ ಜನ ನಮಗೆ ದೂರವಾಗುತ್ತದೆಂದು ದೂರುತ್ತಾರೆ. ಕಿಬ್ಬನಹಳ್ಳಿ ಕ್ರಾಸ್‌ನಲ್ಲಿರತಕ್ಕವರು ಅದನ್ನು ಅಪ್‌ಗ್ರೇಡ್ ಮಾಡಿ ತಿಪಟೂರು ಗ್ರಾಮಾಂತರ ಪೋಲೀಸ್ ಠಾಣೆಯನ್ನು ನಮ್ಮಲ್ಲಿಗೆ ವರ್ಗಾವಣೆ ಮಾಡಬೇಕೆಂದು ಈಗಾಗಲೇ ಕೇಳಿಕೊಂಡಿದ್ದಾರೆ. ಅದರ ಪ್ರಕಾರ ಆರ್ಡರ್ ಕೂಡ ಆಗಿದೆ. ಆದರೆ ಪ್ರಶ್ನೆ ಏನೆಂದರೆ ತಿಪಟೂರು ಗ್ರಾಮಾಂತರ ಪ್ರದೇಶದ ಜನ ನಮಗೆ ದೂರವಾಗುತ್ತದೆಂದು ಒತ್ತಾಯ ತರುತ್ತಿದ್ದಾರೆ. ಜನರಿಗೆ ಯಾವುದು ಅನುಕೂಲವಾಗುತ್ತದೆ ಅದನ್ನು ನೋಡಿ ಮಾಡಬೇಕಾಗುತ್ತದೆ. ಒಂದು ಕಡೆ ಕಿಬ್ಬನಹಳ್ಳಿಯಲ್ಲಿರತಕ್ಕವರಿಗೆ ಇದು ಅನುಕೂಲವಾಗುತ್ತದೆ. ತಿಪಟೂರು ಗ್ರಾಮಾಂತರವ ಸಮೀಪ ಇರತಕ್ಕಂಥ ಹಳ್ಳಿಗಳಿಗೆ ಇದು ಸ್ವಲ್ಪ ಅನಾನುಕೂಲವಾಗುತ್ತದೆ. ಅದಕ್ಕೆ ಈ ಮಧ್ಯೆ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತಿದೆ. ಇದನ್ನು ಯಾವ ರೀತಿಯಾಗಿ ಇಬ್ಬರಿಗೂ ಸಮಾಧಾನವಾಗತಕ್ಕಂಥ ರೀತಿಯಲ್ಲಿ ಬಗೆಹರಿಸಬೇಕು ಎನ್ನತಕ್ಕಂಥಾದ್ದು ಮುಖ್ಯವಾದುದು. ಕಿಬ್ಬನಹಳ್ಳಿ ಕ್ರಾಸ್‌ನಲ್ಲಿ ಇರತಕ್ಕಂಥ ಪೋಲೀಸ್ ಸ್ಟೇಷನ್‌ನನ್ನು ಅಪ್‌ಗ್ರೇಡ್ ಮಾಡಬೇಕೋ ಅಥವಾ ತಿಪಟೂರು ಗ್ರಾಮಾಂತರ ಪೋಲೀಸ್ ಠಾಣೆಯನ್ನು ಸ್ಥಳಾಂತರ ಮಾಡಿ ಆ ಹಳ್ಳಿಗಳನ್ನು ತಿಪಟೂರು ಪಟ್ಟಣಕ್ಕೆ ಸೇರಿಸಬೇಕೋ ಎನ್ನುವುದರ ಬಗ್ಗೆ ನಾವು ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ. ಅಲ್ಲಿಯವರೆಗೆ ಅವರು ಸ್ವಲ್ಪ ಸಹಕರಿಸಿ ನಮಗೆ ಅವಕಾಶ ಮಾಡಿಕೊಟ್ಟರೆ ಯಾವುದಾದರೂ ಒಂದು ತೀರ್ಮಾನವನ್ನು ತೆಗೆದುಕೊಳ್ಳಬಹುದು. ಇಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಇನ್ನೂ ಒಂದು ಅಪ್‌ಗ್ರೇಡ್ ಮಾಡತಕ್ಕಂಥ ವ್ಯವಸ್ಥೆಯನ್ನೂ ಕೂಡ ಮಾಡಿದರೆ ಆದರಿಂದ ಈ ಸಮಸ್ಯೆ ಬಗೆಹರಿಯುತ್ತದೆ ಎನ್ನುವುದನ್ನೂ ಕೂಡ ನಾವು ಯೋಚನೆ ಮಾಡುತ್ತೇವೆ. ಅದಕ್ಕಾಗಿ ಇದರಲ್ಲಿ ಪರ-ವಿರೋಧ ಇಲ್ಲ. ಜನರಿಗೆ ಅನುಕೂಲವಾಗತಕ್ಕಂಥ ದೃಷ್ಟಿಯಿಂದ ಇದನ್ನು ನಾವು ನೋಡುತ್ತಿದ್ದೇವೆ.

ಅಧ್ಯಕ್ಷರು: ಮುಂದಿನ ಪ್ರಶ್ನೆ ಪ್ರಭಾಕರ ಬಂಗೇರ ಅವರದ್ದು. ನಾನು ಯೋಚನೆ ಮಾಡುತ್ತಿರ್ಬೇಕೆ ಎಂದು ಅವರು ಹೇಳಿದ್ದಾರೆ.

ಶ್ರೀ ಸಿ.ಬಿ.ಸುರೇಶ್‌ಬಾಬು: ಅವರ ಉತ್ತರ ಸರಿಯಿಲ್ಲ ಅಲ್ಲಿಯ ಇನ್ಸಿಡೆನ್ಸ್ ಹೇಳುತ್ತೇನೆ. ತಾವು ದಯಮಾಡಿ ಅವಕಾಶ ಕೊಡಬೇಕು.

Mr.SPEAKER: I cannot direct a Minister to answer like this or like that. ಸಮಗ್ರವಾಗಿ ಪರಿಶೀಲಿಸುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ. Pros and cons ಇದೆ. ಕಂಪ್ಲೇಟ್ಸ್ ಇದೆ.

ಶ್ರೀ ಸಿ.ಬಿ.ಸುರೇಶ್‌ಬಾಬು: ಅದಕ್ಕೆ ನನ್ನ ಒಪ್ಪಿಗೆ ಇದೆ. ಅಲ್ಲಿ ಆಗತಕ್ಕಂಥ ಇನ್ಸಿಡೆನ್ಸ್ ಬಗ್ಗೆ ಮಾನ್ಯ ಗೃಹ ಸಚಿವರಿಗೆ ಹೇಳುವುದಕ್ಕೆ ತಾವು ದಯಮಾಡಿ ನನಗೆ ಅವಕಾಶ ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಯಾರೂ ಇನ್‌ಫ್ಲುಯೆನ್ಸ್ ಮಾಡಲಾರದೇನೇ ನಿಮಗೆ ನಾವು ಒಂದು ಪೋಲೀಸ್ ಸ್ಟೇಷನ್‌ನನ್ನು ಕೊಡಲಿಲ್ವಾ? ಅಲ್ಲಿ ಡಿಸ್‌ಪ್ಯೂಟ್ ಬಂದಿದೆ. ನೀವು ಕೇಳದೇ ಇದ್ದರೂ ಕೂಡ ಚಿತ್ರದುರ್ಗ ಮತ್ತು ನಿಮ್ಮ ಮತಕ್ಷೇತ್ರದ ಮಧ್ಯೆ ಬಹಳ ದೂರವಾಗುತ್ತದೆ ಎಂದು ಹೇಳಿ ನೀವು ಕೇಳದೇ ಇದ್ದರೂ ಕೂಡ ನಾನು ಬರೇ ಡಿ.ಜಿ.ಪಿ.ಯವರ ಶಿಫಾರಸ್ಸಿನ ಮೇರೆಗೆ ಮಾಡಿದ್ದೇನೆ. ಕಾನೂನು ವ್ಯವಸ್ಥೆ ನಮಗೆ ಬಹಳ ಮುಖ್ಯವೇ ಹೊರತಾಗಿ ಯಾರು ವಿರೋಧ ಮಾಡುತ್ತಾರೋ, ಪರ ಮಾಡುತ್ತಾರೋ ಎನ್ನತಕ್ಕದ್ದು ಅಲ್ಲ. ಜನರಿಗೆ ಕೂಡ ಅನುಕೂಲವಾಗಬೇಕು ಮತ್ತು ಸಮಸ್ಯೆಯೂ ಬಗೆಹರಿಯಬೇಕು. ನಿಮ್ಮ ಜನರಿಗೂ ಕೂಡ ದೂರ ಆಗಬಾರದು ಮತ್ತು ತಿಪಟೂರು ಗ್ರಾಮೀಣ ಭಾಗದವರಿಗೂ ಕೂಡ ತೊಂದರೆ ಆಗಬಾರದು ಅದನ್ನು ನೋಡುತ್ತಿದ್ದೇವೇ ಹೊರತಾಗಿ ಬೇರೆ ವಿಚಾರ ಇಲ್ಲ.

ಶ್ರೀ ಸಿ.ಬಿ.ಸುರೇಶ್ ಬಾಬು: ಮಾನ್ಯ ಅಧ್ಯಕ್ಷರೇ, ಅಲ್ಲಿ ಇನ್ಸಿಡೆನ್ಸ್ ಏನು ಎಂದು.....

ಅಧ್ಯಕ್ಷರು: ಆಯಿತಲ್ಲಪ್ಪ? "Wait for some more time, we will settle the matter" ಎಂದು ಅವರು ಹೇಳಿದ್ದಾರೆ.

ಶ್ರೀ ಸಿ.ಬಿ.ಸುರೇಶ್‌ಬಾಬು: ದಯಮಾಡಿ ಎರಡು ವಿಷಯ ಹೇಳುವುದಕ್ಕೆ ಅವಕಾಶ ಕೊಡಿ....

(ಗೊಂದಲ)

ಅಧ್ಯಕ್ಷರು: ಇದನ್ನು ಇಲ್ಲಿ ಹೌಸ್‌ನಲ್ಲಿ ಚರ್ಚೆ ಮಾಡಿದರೆ ಹೇಗೆ? ಮಂತ್ರಿಗಳ ಜೊತೆ ಇತ್ಯರ್ಥ ಮಾಡಿಕೊಳ್ಳುವುದಕ್ಕೆ ಅವರ ಚೇಂಬರಿಗೆ ಹೋಗಿ ಹೇಳಿ. ಸ್ವಲ್ಪ ಟೈಮ್ ಕೊಡಿ, ಎಲ್ಲವನ್ನೂ ಎಕ್ಸಾಮಿನ್ ಮಾಡುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ.

ಶ್ರೀ ಸಿ.ಬಿ.ಸುರೇಶ್ ಬಾಬು: ಅದಕ್ಕೆ ನನ್ನ ಒಪ್ಪಿಗೆ ಇದೆ.

ಅಧ್ಯಕ್ಷರು: ದಯವಿಟ್ಟು ತಾವು ಅರ್ಥಮಾಡಿಕೊಳ್ಳಬೇಕು. When the Minister himself is requesting. "Wait for some time, We will settle the matter" ಎಂದು ಅವರು ಹೇಳಿದ್ದಾರೆ. ಇನ್ನೂ ಅದರ ಮೇಲೆ ಏನು ಹೇಳುತ್ತೀರಿ?

ಶ್ರೀ ಸಿ.ಬಿ.ಸುರೇಶ್‌ಬಾಬು: ಅಲ್ಲಿ ನ್ಯಾಷನಲ್ ಹೈವೇ ಇದ್ದು ನಾಲ್ಕು ದಾರಿಗಳು ಕೂಡುತ್ತವೆ. ಅಲ್ಲಿ ಸಾಕಷ್ಟು ಇನ್ಸಿಡೆನ್ಸ್ ಆಗುತ್ತಿವೆ. ಆದಷ್ಟು ಬೇಗ ಅದನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಈಗ ಇರತಕ್ಕಂಥಾದ್ದು 62 ಹಳ್ಳಿಗಳಿಗೆ ಸಂಬಂಧಪಟ್ಟಂಥ ಪೋಲೀಸ್ ಸ್ಟೇಷನ್. ಅದರ ಮಹತ್ವ ತಿಳಿದುಕೊಂಡೇನೇ ಅಲ್ಲಿ ಈಗಾಗಲೇ ಒಂದು ಔಟ್‌ಪೋಸ್ಟ್ ಇದೆ. ಅದನ್ನು ಅಪ್‌ಗ್ರೇಡ್ ಮಾಡಬೇಕು ಎಂದರೆ ನಮಗೆ ಹಣದ ಅಭಾವ ಇದೆ. ತಿಪಟೂರು ರೂರಲ್ ಪೋಲೀಸ್ ಸ್ಟೇಷನ್‌ನನ್ನು ಅಲ್ಲೇ ಇಟ್ಟು ಇದನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಸಾಧ್ಯತೆಯನ್ನು ನೋಡುತ್ತಿದ್ದೇವೆ. ಹಣಕಾಸಿನ ವ್ಯವಸ್ಥೆ ಸರಿ ಹೋದ ಮೇಲೆ ಖಂಡಿತವಾಗಿಯೂ ಅದಕ್ಕೆ ಆದ್ಯತೆಯನ್ನು ಕೊಡುತ್ತೇವೆ. ನೀವು ಹೇಳುವುದರಲ್ಲಿ ಅರ್ಥವಿದೆ. ನಾನು ಇಲ್ಲವೆಂದು ಹೇಳುತ್ತಿಲ್ಲ. ಆ ದೃಷ್ಟಿಯಿಂದಲೇ ಇದನ್ನು ಎಕ್ಸಾಮಿನ್ ಮಾಡಿ ಸಧ್ಯಕ್ಕೆ ಈಗ ಔಟ್‌ಪೋಸ್ಟ್‌ನ್ನು ಮಾಡಿಕೊಟ್ಟಿದ್ದೇವೆ. ಇದನ್ನು ಅಪ್‌ಗ್ರೇಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಆರ್.ಇ.ಸಿ. ಯೋಜನೆಯಡಿಯಲ್ಲಿ ಕೆ.ಪಿ.ಟಿ.ಸಿ.ಎಲ್. ನವರು ಗುರುತಿಸಿರುವ ಉಪಗ್ರಾಮಗಳು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 86(900)

ಸದಸ್ಯರ ಹೆಸರು: ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ)

ಪ್ರಶ್ನೆ

ಅ. ಕೆ.ಪಿ.ಟಿ.ಸಿ.ಎಲ್. ನವರು ಆರ್.ಇ.ಸಿ. ಯೋಜನೆ ಅಡಿಯಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಗುರುತಿಸಲಾಗಿರುವ ಉಪ ಗ್ರಾಮಗಳು ಯಾವುವು? ಎಷ್ಟು ಉಪ ಗ್ರಾಮಗಳಿಗೆ ವಿದ್ಯುತ್ ಸಂಪರ್ಕವನ್ನು ಕೊಡಲಾಗಿದೆ. ಉಳಿದವುಗಳಿಗೆ ಯಾವಾಗ ಸಂಪರ್ಕವನ್ನು ಕೊಡಲಾಗುವುದು?

ಆ. ವಿದ್ಯುದೀಕರಣಕ್ಕೆ ಬೇಕಾಗುವ ವಿವಿಧ ಸ್ತರದ ಸಾಮಗ್ರಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಕೊರತೆಯನ್ನು ನಿವಾರಿಸುವಲ್ಲಿ ಇಲಾಖೆಯ